**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶಹಾಪೂರ**

CW 5 PW-3

ಸಿ.ಸಿ.ನಂ.850/2025

| | | |
|---|---|---|
| ಹೆಸರು | ಃ | ಯಂಕೋಬಾ |
| ತಂದೆ ಹೆಸರು | ಃ | ನಿಂಗಣ್ಣ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | PC No.16 B.Gudi PS |
| ವಾಸ | ಃ | ಭೀ ಗುಡಿ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 23-03-2026.**

**ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**

ನಾನು 2020 ರಿಂದ ಇಲ್ಲಿವರಿಗೆ ಭೀಮರಾಯನಗುಡಿ ಆರಕ್ಷಕ ಠಾಣೆಯಲ್ಲಿ PC ಎಂದು ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ.

2. ದಿಃ 05-07-2025 ರಂದು ಸಾಯಂಕಾಲ 04.00 ರ ಸಮಯದಲ್ಲಿ ಠಾಣೆಯಲ್ಲಿದ್ದಾಗ ಚಾಸಾ1 ರವರು ಶಿರವಾಳ ಗ್ರಾಮದ ಗ್ರಾಮ ಪಂಚಾಯಿತಿ ಕಾರ್ಯಾಲಯ ಹತ್ತಿರ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದಾಗಿ ತಮಗೆ ಭಾತ್ಮಿ ಬಂದಿರುವುದಾಗಿ ತಿಳಿಸಿರುತ್ತಾರೆ. ನಂತರ ನಾನು, ಚಾಸಾ4 ಮತ್ತು 5 ರವರು ಹಾಜರಾಗಿ ನಂತರ ಚಾಸಾ1 ರವರು ಚಾಸಾ4 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದರ ಮೇರೆಗೆ ಅವರು ಚಾಸಾ2 ಮತ್ತು 3 ರವರನ್ನು ಕರೆದುಕೊಂಡು ಬಂದಿರುತ್ತಾರೆ. ಚಾಸಾ1 ರವರು ಚಾಸಾ2 ಮತ್ತು 3 ರವರಿಗೆ ತಮಗೆ ಬಂದ ಮಾಹಿತಿಯ ಬಗ್ಗೆ ತಿಳಿಸಿ ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿರುತ್ತಾರೆ ನಂತರ ನಾವೆಲ್ಲರೂ ನಮ್ಮ ಠಾಣಾ ವಾಹನದಲ್ಲಿ ಸಾಯಂಕಾಲ 4.40 ಕ್ಕೆ ಶಿರವಾಳ ಗ್ರಾಮ ಬಿಟ್ಟಿರುತ್ತೇವೆ. ಸದರಿ ಸ್ತಳಕ್ಕೆ ನಾವು ಸಾಯಂಕಾಲ 5.05 ಕ್ಕೆ ತಲುಪಿರುತ್ತೇವೆ. ನಂತರ ನಾವು ಜೀಪಿನಿಂದ ಇಳಿದು ಸದರಿ ಕಾರ್ಯಾಲಯದ ಹತ್ತಿರ ನಿಂತು ನೋಡಿದಾಗ ಆರೋಪಿಯು ಮದ್ಯವನ್ನು

ಮಾರಾಟ ಮಾಡುತ್ತಿದ್ದರು. ನಮ್ಮ ಹಾಗೂ ಸದರಿ ಪಂಚರ ಸಮಕ್ಷಮ ಚಾಸಾ1 ರವರು ದಾಳಿ ಮಾಡಿ ಮದ್ಯ ಮಾರಾಟ ಮಾಡುವುದರ ಬಗ್ಗೆ ಪರವಾನಿಗೆಯನ್ನು ಕೇಳಿದಾಗ ಅವರು ಇರುವುದಿಲ್ಲ ಎಂದು ಹೇಳಿರುತ್ತಾರೆ. ಆರೋಪಿಯಿಂದ ಚಾಸಾ1 ರವರು 34 OC ವಿಸ್ಕಿಯ ಪೌಚಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ದಾಳಿಯನ್ನು ಮಾಡಿದಾಗ ಅಲ್ಲಿದ್ದ ಸಾರ್ವಜನಿಕರು ಅಲ್ಲಿಂದ ಓಡಿ ಹೋಗಿರುತ್ತಾರೆ. ಆರೋಪಿಯು ಸಿಕ್ಕಿರುತ್ತಾರೆ. ಪಂಚನಾಮೆಯನ್ನು ಸಾಯಂಕಾಲ 5.15 ರಿಂದ 6.15 ಗಂಟೆಯವರೆಗೆ ಮಾಡಲಾಗಿರುತ್ತದೆ. ಈ ಕುರಿತಂತೆ ನಾನು ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಮುದ್ದೆ ಮಾಲನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿರುತ್ತದೆ.

**ಪಾಟಿ ಸವಾಲು ಆರೋಪಿತರ ಪರವಾಗಿ ಶ್ರೀ. RMH ಮಾನ್ಯ ವಕೀಲರಿಂದಃ**

3. ಘಟನಾ ಸ್ತಳಕೆ ನಾವು ಒಟ್ಟು ಆರು ಜನ ಹೋಗಿರುತ್ತೇವೆ. ನಾನು, ಚಾಸಾ1 ರಿಂದ 5 ರವರು ಹೋಗಿರುತ್ತೇವೆ. ನಾವು ಘಟನಾ ಸ್ತಳಕ್ಕೆ ಹೋದಾಗ ಸಮಯ ರಾತ್ರಿ 7.50 ರ ಸಮಯವಾಗಿತ್ತು. ನಮ್ಮ ಠಾಣೆಗೂ ಹಾಗೂ ಘಟನಾ ಸ್ತಳಕ್ಕೂ ಸುಮಾರು 12 ಕಿ.ಮೀ. ಅಂತರ ಇರುತ್ತದೆ. ಚಾಸಾ1 ರವರು ಚಾಸಾ2 ಮತ್ತು 3 ರವರಿಗೆ ಪಂಚರಾಗಲು ನೋಟಿಸನ್ನು ಕೊಡಲು ವೇಳೆ ಇರದ ಕಾರಣ ಅವರಗೆ ಬಾಯಿ ಮಾತಿನ ಮೂಲಕ ಪಂಚರಾಗಲು ಹೇಳಿರುತ್ತಾರೆ. ಚಾಸಾ2 ಮತ್ತು 3 ರವರು ಆ ದಿನ ಭೀ ಗುಡಿಯ ಬಾಪುಗೌಡ ಚೌಕನಲ್ಲಿದ್ದರು. ಚಾಸಾ3 ರವರು ಶಖಾಪೂರ ಗ್ರಾಮದವರು ಹಾಗೂ ಚಾಸಾ2 ರವರು ಹೊತಪೇಟ ಗ್ರಾಮದವರಾಗಿರುತ್ತಾರೆ. ಸಾಕ್ಷಿಗೆ ಈಗ ಚಾಸಾ2 ಮತ್ತು 3 ರವರು ನಿಮ್ಮ ಠಾಣಾ ಎಲ್ಲಾ ಪ್ರಕರಣಗಳಲ್ಲಿ ಖಾಯಂ ಪಂಚರಾಗಿರುತ್ತಾರೆ ಎಂದು ಹೇಳಿದಕ್ಕೆ ಸಾಕ್ಷಿ ಸರಿಯಲ್ಲ ಎಂದು ಹೇಳುತ್ತಾರೆ. ನಾನೇ ಸದರಿ ದಿನದಂದು ಸದರಿ ಪಂಚರನ್ನು ಕರೆದುಕೊಂಡು ಬರಲು ಹೋಗಿರುತ್ತೇನೆ. ನನಗೆ ಚಾಸಾ2 ಮತ್ತು 3 ರವರ

ಪರಿಚಯ ಈ ಮೊದಲಿನಿಂದಲೂ ಇರುತ್ತದೆ. ಘಟನಾ ಸ್ತಳದಲ್ಲಿ ಎಷ್ಟು ಅಂಗಡಿಗಳು ಇರುತ್ತವೆ ಎಂದು ಕೇಳಿದ್ದಕ್ಕೆ ಸಾಕ್ಷಿ ಆರೋಪಿಯು ಮದ್ಯ ಮಾರಾಟ ಮಾಡುತ್ತಿದ್ದ ಅಂಗಡಿಯನ್ನು ಮಾತ್ರ ಗಮನಿಸಿರುವುದಾಗಿ ಹೇಳುತ್ತಾರೆ. ನಾವು ಸದರಿ ಅಂಗಡಿಯ ಮೇಲೆ ದಾಳಿಯನ್ನು ಮಾಡಲು ಹೋದಾಗ ಅಂಗಡಿಯಲ್ಲಿದ್ದ ಜನರು ನಮ್ಮನ್ನು ನೋಡಿ ಸದರಿ 3-4 ಜನ ಓಡಿ ಹೋಗಿರುತ್ತಾರೆ. ನಾವುಗಳು ಸದರಿ ಓಡಿ ಹೋಗುತ್ತಿದ್ದ ಜನರುಗಳನ್ನು ಹಿಡಿಯಲು ಪ್ರಯತ್ನಪಟ್ಟಿರುವುದಿಲ್ಲ. ಸದರಿ ದಿನದಂದು ಚಾಸಾ1 ರವರು ಯಾವುದೇ ಜಪ್ತಿ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ಮುದ್ದೆ ಮಾಲನ್ನು ಅಮಾತನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ಚಾಸಾ1 ರವರು ದಾಳಿಯನ್ನು ಮಾಡಲು ಸಂಬಂದಪಟ್ಟ ನ್ಯಾಯಾಲಯದಿಂದ ಯಾವುದೇ ಪೂರ್ವಾನುಮತಿಯನ್ನು ವೇಳೆ ಇರದ ಕಾರಣ ತೆಗೆದುಕೊಂಡಿರುವುದಿಲ್ಲ. ಸದರಿ ದಿನದಂದು ಆರೋಪಿಯಿಂದ 32 OC ವಿಸ್ಕಿಯ ಪೌಚಗಳನ್ನು ಅಮಾನತ್ತುಪಡಿಸಿಕೊಂಡಿದ್ದು ಅವುಗಳ ಸಿರಿಯಲ್ ನಂಬರ ನನಗೆ ಗೊತ್ತಿರುವುದಿಲ್ಲ ಹಾಗೂ ಅವುಗಳ ಸಂಖ್ಯೆಯನ್ನು ನಿಪಿ.3 ರಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿಯಿಂದ ಸದರಿ ದಿನದಂದು ಯಾವುದೇ ಹಣವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸದರಿ ಅಂಗಡಿ ಇರುವ ಜಾಗ ಯಾರದಾಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಆರೋಪಿಯು ತಮ್ಮ ತಂದೆ ತಾಯಿಯ ಜೊತೆಗೆ ಒಕ್ಕುಲುತವನ್ನು ಮಾಡಿಕೊಂಡಿದ್ದು ಅವರು ಯಾವುದೇ ಕಿರಾಣಿ ಅಂಗಡಿಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಿರಿಯ ಅಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ-ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶಹಾಪೂರ**

CW 8 PW-2

ಸಿ.ಸಿ.ನಂ.850/2025

| | | |
|---|---|---|
| ಹೆಸರು | ಃ | ಹುಲಗಪ್ಪ |
| ತಂದೆ ಹೆಸರು | ಃ | ಭೀಮರಾಯ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | PSI B.Gudi PS |
| ವಾಸ | ಃ | ಭೀ ಗುಡಿ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 23-03-2026.**
**ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**

ನಾನು ಸುಮಾರು 2 ವರ್ಷಗಳಿಂದ ಇಲ್ಲಿವರೆಗೆ ಭೀಮರಾಯನಗುಡಿ ಆರಕ್ಷಕ ಠಾಣೆಯಲ್ಲಿ ಪಿಎಸಐ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

2. ದಿಃ 05-07-2025 ರಂದು ಸಾಯಂಕಾಲ 7.50 ಕ್ಕೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ1 ರವರು ಠಾಣೆಗೆ ಹಾಜರಾಗಿ ಒಂದು ವರದಿ, ಮುದ್ದೆ ಮಾಲು ಹಾಗೂ ಜಪ್ತಿ ಪಂಚನಾಮೆಯನ್ನು ಆರೋಪಿಯೊಂದಿಗೆ ಹಾಜರುಪಡಿಸಿರುತ್ತಾರೆ. ಸಾಕ್ಷಿ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಜಪ್ತಿ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ.1(ಬಿ) ಎಂದು ಗುರುತಿಸಲಾಯಿತು. ನಿಪಿ.2 ರ ಆಧಾರದ ಮೇಲೆ ಠಾಣಾ ಗುನ್ನಾ ನಂಬರ 59/2025 ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡು ಅದನ್ನು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ನನ್ನ ಮೇಲಾಧಿಕಾರಿಗಳಿಗೂ ನಿವೇದನೆ ಮಾಡಿಕೊಂಡಿರುತ್ತೇನೆ. ಪ್ರ.ವ.ವ ಯನ್ನು ನಿಪಿ.3 ಹಾಗೂ ಸಾಕ್ಷಿಯ ಸಹಿಯನ್ನು

ನಿಪಿ.3(ಎ) ಎಂದು ಗುರುತಿಸಲಾಯಿತು. ನಾನು ಅದೇ ದಿನ ಚಾಸಾ 4 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಗೆ ವಿಚಾರಣೆಗೆ ಹಾಜರಾಗಲು notice ನ್ನು ಜಾರಿ ಮಾಡಿರುತ್ತೇನೆ. ದಿಃ 18-07-2025 ರಂದು ಮುದ್ದೆ ಮಾಲನ್ನು FSL ಗಾಗಿ ನಮ್ಮ ಠಾಣಾ ಸಿಬ್ಬಂದಿ PC No.233 ಇವರ ಜೊತೆಗೆ ಕಲಬುರಗಿಗೆ ಕಳುಹಿಸಿರುತ್ತೇನೆ. ದಿಃ07-08-2025 ರಂದು ಸಿ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ಸಿ ವರದಿಯನ್ನು ಈಗ ನಿಪಿ.4, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಆರೋಪಿಯ ವಿರುದ್ದ ಸಾಕಾಷ್ಟು ಸಾಕ್ಷಾಧಾರ ಇದ್ದುದರಿಂದ ಅವರ ವಿರುದ್ದ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು ಅದನ್ನು ಈಗ ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಸಾಕ್ಷಿಯು ಮಾನ್ಯ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲು ಆರೋಪಿತರ ಪರವಾಗಿ ಶ್ರೀ. RMH ಮಾನ್ಯ ವಕೀಲರಿಂದಃ</u>**

3. ಸದರಿ ದಿನದಂದು ಚಾಸಾ1 ರವರು ನನ್ನ ಸಮಕ್ಷಮ ಮುದ್ದೆ ಮಾಲು, ಜಪ್ತಿ ಪಂಚನಾಮೆಯೊಂದಿಗೆ ಆರೋಪಿಯನ್ನು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ1 ರವರು ಮಾತನ್ನು ಕೇಳಿ ಆರೋಪಿಯ ವಿರುದ್ದ ಸುಳ್ಳಾದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ4 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ವಿಚಾರಣೆಗೆ ಹಾಜರಾಗಲು ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮುದ್ದೆ ಮಾಲನ್ನು FLS ಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ.5 ನ್ನು ಪಡೆದು ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಸ್ವಖುಷಿ ಹೇಳಿಕೆ ಪಡದುಕೊಂಡಿರುತ್ತೇನೆ. ನಾನು ಪ್ರಸ್ತುತ ಕಡತವನ್ನು ಪಡೆದ ನಂತರ ಗುನ್ನಾ ಸ್ತಳಕ್ಕೆ ಭೇಟಿ ನೀಡಿರುವುದಿಲ್ಲ. ನಮ್ಮ ಠಾಣಾ ಅಂಕಿ ಅಂಶಗಳಿಗೊಳ್ಕರ ಆರೋಪಿಯ ವಿರುದ್ದ ಸುಳ್ಳಾದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ನಾನು ಠಾಣೆಯಲ್ಲಿ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ-ಇಲ್ಲ.</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.